**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

**ಸಿ.ಸಿ.ನಂ.768/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಟರಾಜು ಆರ್ | ಸಿ.ಡಬ್ಲ್ಯು-4 |
| ತಂದೆಯ ಹೆಸರು | : | ಲೇ.ರುದ್ರಪ್ಪ | ಪಿ.ಡಬ್ಲ್ಯು-3 |
| ವಯಸ್ಸು | : | 44 ವರ್ಷ | - |
| ಉದ್ಯೋಗ | : | ಹೆಚ್.ಸಿ 60 | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ: **18.10.2023.** |
| ವಾಸಸ್ಥಳ | : | ಮಾವಿನಹಳ್ಳಿ | - |

**ಮುಖ್ಯ ವಿಚಾರಣೆ: ಎಪಿಪಿ ರವರಿಂದ:**

ನಾನು ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ 2014 ರಿಂದ 2019 ರವರೆಗೆ ಪೊಲೀಸ್ ಪೇದೆ ಸಿಪಿಸಿ ನಂ.52 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 04.03.2017 ರಂದು ಮಧ್ಯಾಹ್ನ 2.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ಠಾಣೆಯಲ್ಲಿರುವಾಗ ಅಕ್ರಮ ಮದ್ಯ ಮಾರಾಟ ಮಾಡುವ ಬಗ್ಗೆ ಮಾಹಿತಿ ಬಂದಿದ್ದು ಈ ಬಗ್ಗೆ ದಾಳಿ ಮಾಡಲು ಹೋಗಬೇಕಾಗುತ್ತದೆ ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-1 ರವರು ಪಂಚರಾದ ಚಾಸಾ-2 ತಿಮ್ಮನಾಯಕ, ಚಾಸಾ-3 ಪ್ರಕಾಶ , ನಮ್ಮ ಠಾಣಾ ಸಿಬ್ಬಂದಿಗಳಾದ ಚಾಸಾ-5 ಮತ್ತು 6 ರವರು ಕೆಎ-55 ಜಿ 401 ಇಲಾಖಾ ಜೀಪಿನಲ್ಲಿ ಎನ್ ಬೇಗೂರು ಗ್ರಾಮದ ಸೋಮಣ್ಣ ರವರ ಮನೆಯ ಮುಂಭಾಗ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು ಮೂರು ನಾಲ್ಕು ಜನರು ನಮ್ಮ ಇಲಾಖಾ ಜೀಪನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಸೋಮಣ್ಣ ಈತನನ್ನು ಹಿಡಿದು ಸಾರಾಯಿ ಮಾರಾಟ ಮಾಡಲು ರಹದಾರಿಯ ಬಗ್ಗೆ ಕೇಳಲಾಗಿ ಆತ ಇಲ್ಲ ಎಂದು ನುಡಿದಿರುತ್ತಾರೆ. ಒಂದು ಬಿಳಿ ಚೀಲದಲ್ಲಿ ಮದ್ಯ ತುಂಬಿದ 90 ಎಂ.ಎಲ್ ನ 30 ವಿಂಡ್ಸರ್ ಡೀಲಕ್ಸ್ ವಿಸ್ಕಿ ಪೌಚುಗಳು, ಮತ್ತು 90 ಎಂ.ಎಲ್ ನ 22 ಒರಿಜಿನಲ್ ಚಾಯ್ಸ್ ವಿಸ್ಕಿಯ ಪೌಚುಗಳರುಇರುವುದು ಕಂಡುಬಂದಿರುತ್ತದೆ. ಆರೋಪಿ ಸೋಮಣ್ಣನನ್ನು ಸದರಿ ಪ್ರಮಾಣದ ಮದ್ಯದ ಪೌಚುಗಳ ಸಮೇತ ಠಾಣೆಗೆ ಕರೆತಂದಿರುತ್ತೇವೆ.

90 ಎಂಎಲ್ ನ 30 ವಿಂಡ್ಸರ್ ಡೀಲಕ್ಸ್ ವಿಸ್ಕಿಗಳ ಪೌಚುಗಳ ಪೈಕಿ 16 ಪೌಚುಗಳು ಮತ್ತು 22 ಒರಿಜಿನಲ್ ಚಾಯ್ಸ್ ವಿಸ್ಕಿಯ ಪೌಚುಗಳ ಪೈಕಿ 12 ಪೌಚುಗಳನ್ನು ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆಗೆಂದು ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಇಂಗ್ಲೀಷಿನ ಎನ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇವೆ.

ರಾಸಾಯನಿಕ ಪರೀಕ್ಷೆಯ ವರದಿ ಬಂದ ನಂತರ ಪರೀಕ್ಷೆಗೆ ಕಳುಹಿಸಿದ ಖಾಲಿ ಪೌಚುಗಳು ಈಗ ನ್ಯಾಯಾಲಯದ ಮುಂದೆ ಇದ್ದು ವಿಂಡ್ಸರ್ ವಿಸ್ಕಿಯ ಖಾಲಿ ಪೌಚುಗಳನ್ನು ಮು.ಮ-1 ರಿಂದ 16 , ಒರಿಜಿನಲ್ ಚಾಯ್ಸ್ ವಿಸ್ಕಿಯ 12 ಪೌಚುಗಳನ್ನು ಮು.ಮ-17 ರಿಂದ 28 ಎಂದು ಗುರುತಿಸಲಾಯಿತು. ಮತ್ತು ಬಿಳಿ ಪ್ಲಾಸ್ಟಿಕ್ ಕವರನ್ನು ಮು.ಮ.29 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಚಾಸಾ-8 ರವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದ:**

ಠಾಣೆಗೂ ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೂ ಎಷ್ಟು ಕಿ.ಮೀ ಅಂತರವಿದೆ ಎಂದು ಕೇಳಲಾಗಿ ಸಾಕ್ಷಿಯು ಸುಮಾರು 10 ರಿಂದ 12 ಕಿ.ಮೀ ಅಂತರವಿದೆ ಎಂದು ನುಡಿದಿರುತ್ತಾರೆ. ಅಕ್ರಮವಾಗಿ ಸಾರಾಯಿ

ಮಾರಾಟ ಮಾಡುವ ಬಗ್ಗೆ ಚಾಸಾ-1 ರವರಿಗೆ ಮಾಹಿತಿ ಬಂದಾಗ ನಾನು ಪೊಲೀಸ್ ಠಾಣೆಯಲ್ಲಿ ಇದ್ದೆ. ಚಾಸಾ-2 ಮತ್ತು 3 ಪಂಚರುದಾರರನ್ನು ಎಲ್ಲಿಂದ ಕರೆಸಿದ್ದೀರಿ ಎಂದು ಕೇಳಲಾಗಿ ಸಾಕ್ಷಿಯು ಅವರು ನಮ್ಮ ಠಾಣಾ ಆವರಣದಲ್ಲಿ ಇದ್ದು ಅವರನ್ನು ಕೇಳಿಕೊಂಡ ಮೇರೆಗ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೂ ಮತ್ತು ಪಂಚರುದಾರರ ಊರಿಗೂ ತುಂಬಾ ಅಂತರವಿರುತ್ತದೆ ಎಂದರೆ ಸಾಕ್ಷಿಯು ಸುಮಾರು 10 ಕಿ.ಮೀ ಅಂತರವಿರುತ್ತದೆ ಎಂದು ನುಡಿಯುತ್ತಾರೆ. 2.00 ಗಂಟೆಗೆ ಠಾಣೆಯನ್ನು ಬಿಟ್ಟ 2.30 ಗಂಟೆಗೆ ಸ್ಥಳ ತಲುಪಿರುತ್ತೇವೆ. ಠಾಣೆಯಿಂದ ನಾನು, ನಮ್ಮ ಪೊಲೀಸ್ ಸಿಬ್ಬಂದಿಗಳು ಮತ್ತು ಪಂಚದಾರರು ಸೇರಿ ಒಟ್ಟು 6 ಜನ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ.

ಠಾಣಾ ದಿನಚರಿಯಲ್ಲಿ ಠಾಣೆಯನ್ನು ಬಿಟ್ಟು ಬೇರೆ ಕಡೆ ಕರ್ತವ್ಯಕ್ಕೆ ಹೋಗಬೇಕಾದಲ್ಲಿ ದಿನಚರಿಯಲ್ಲಿ ನಮೂದು ಮಾಡಬೇಕು ಎಂದರೆ ಸರಿ, ಅದನ್ನು ನಮೂದು ಮಾಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿ ಸೋಮಣ್ಣ ರವರ ಮನೆ ಅವರ ಊರಿನಲ್ಲಿ ಎಲ್ಲಿ ಇತ್ತು ಎಂದುತಮಗೆ ಮೊದಲೇ ಗೊತ್ತಿತ್ತಾ ಎಂದು ಕೇಳಲಾಗಿ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿ ಸೋಮಣ್ಣ ಘಟನಾ ಪೂರ್ವಕ್ಕೂ ಮುಂಚೆ ಯಾವಾಗಿನಿಂದ ಗೊತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯ ಹತ್ತಿರ ಹೋದಾಗ ಮೂರು ನಾಲ್ಕು ಜನ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಎಂದು ತಾವು ಹೇಳಿದ್ದು, ಅವರನ್ನು ಹಿಡಿಯಲು ಪ್ರಯತ್ನಿಸಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಹಿಡಿಯಲು ಪ್ರಯತ್ನ ಮಾಡಿರುತ್ತೇವೆ. ಅವರು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಓಡಿ ಹೋದ ವ್ಯಕ್ತಿಗಳ ಹೆಸರು ಕೇಳಿರುವುದಿಲ್ಲ ಎಂದರೆ ಸರಿ .

ಆರೋಪಿಯ ಮೇಲೆ ದಾಳಿ ಮಾಡುವ ಮುನ್ನ ಪ್ರ.ವ ವರದಿ ದಾಖಲಿಸಿದ್ದೆವು ಎಂದರೆ ಸರಿ . ನಿಮ್ಮ ಮಹಜರಿನಲ್ಲಿ ಪ್ಲಾಸ್ಟಿಕ್ ಚೀಲ ಎಂದು ಹೇಳಿದ್ದು, ಆದರೆ ಪ್ಲಾಸ್ಟಿಕ್ ಚೀಲ ಇಲ್ಲ ಎಂದು ಕೇಳಲಾಗಿ ಸಾಕ್ಷಿಯು ಪ್ಲಾಸ್ಟಿಕ್ ಕವರ್ ಅನ್ನೇ ಪ್ಲಾಸ್ಟಿಕ್ ಚೀಲ ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಪ್ಲಾಸ್ಟಿಕ್ ಕವರ್ ಅನ್ನೇ ಪ್ಲಾಸ್ಟಿಕ್ ಚೀಲ ಎಂದು ನಮೂದಿಸಿಲ್ಲ ಎಂದರೆ ಸರಿ .

ನಿಮ್ಮ ಸಮಕ್ಷಮ ಅಮಾನತ್ತು ಮಹಜರನ್ನು ಮಾಡಿರುತ್ತಾರಾ ಎಂದು ಕೇಳಲಾಗಿ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಯಿಂದ ಮದ್ಯದ ಪೌಚುಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಹೇಳಿದ್ದು, ಸದರಿ ಮದ್ಯದ ಪೌಚುಗಳ ಸೀರಿಯಲ್ ನಂಬರ್ ನಮೂದಿಸಿಲ್ಲ ಎಂದರೆ ಸರಿ . ಆರೋಪಿ ಪರ ವಕೀಲರು ಸಾಕ್ಷಿಗೆ ತಮ್ಮ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತಾರಾ ಎಂದು ಕೇಳಲಾಗಿ ಸಾಕ್ಷಿಯು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸ್ಥಳ ಮಹಜರನ್ನು ನಾನೇ ಬರೆದಿರುತ್ತೇನೆ.

ಮೂರು ಜನ ಆಸಾಮಿಗಳು ನಮ್ಮನ್ನು ನೋಡಿ ಮದ್ಯ ಸೇವನೆ ಮಾಡುತ್ತಿದ್ದುದ್ದನ್ನು ಬಿಟ್ಟು ಓಡಿ ಹೋಗಿರುತ್ತಾರೆ ಎಂದು ಹೇಳಿದ್ದು ಮದ್ಯದ ಲೋಟಗಳನ್ನು ವಶಪಡಿಸಿಕೊಂಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ಆರೋಪಿಗೂ ಮತ್ತು ಮು.ಮ 1 ರಿಂದ 29 ಕ್ಕೂ ಯಾವುದೇ ಸಂಬಂಧ ಇಲ್ಲ, ನಮ್ಮ ಠಾಣೆಯಲ್ಲಿ ವಿಲೇವಾರಿಯಾಗದೆ ಇದ್ದ ಪೌಚುಗಳನ್ನು ಈ ಕೇಸಿಗೆ ಸೇರಿಸಿ ಚಾಸಾ-1 ರವರು ನಮ್ಮ ಠಾಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪಿರ್ಯಾದು ಮಾಡಿದ್ದು, ಅವರನ್ನು ಅನುಸರಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಹಜರ್ ಮಾಡುವ ಕಾಲಕ್ಕೆ ಮು.ಮ 1 ರಿಂದ 29 ರ ಮೇಲೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ . ಚಾಸಾ-8 ರವರ ಮುಂದೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿ.ಎಫ್ ನಲ್ಲಿ ಪ್ಲಾಸ್ಟಿಕ್ ಕವರ್ ಇರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ . ಆರೋಪಿಯನ್ನು ಈ ದಿನವೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**